ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 4, September-October 2024, Pp. 40-46
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಶರಣ ಸುಂಕದ ಬಂಕಣ್ಣನ 'ಭಕ್ತಿ ಸುಂಕ'ದ ಸ್ವರೂಪ

**ಪ್ರೊ. ಎಸ್. ಡಿ.ಶಶಿಕಲಾ**
ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

**Abstract:**
*ಪುರಾಣಗಳಲ್ಲಿ ಉಲ್ಲೇಖಿತನಾದ ಶರಣ ಸುಂಕದ ಬಂಕಣ್ಣನ ಕಾಲ–1160. ಸುಂಕ (ತೆರಿಗೆ) ಸಂಗ್ರಹಿಸುವುದು ಕಾಯಕ. 'ಬಂಕೇಶ್ವರಲಿಂಗ' ಅಂಕಿತದಲ್ಲಿ 108 ವಚನಗಳು ದೊರೆತಿವೆ. ಕಾಯಕದ ಪರಿಭಾಷೆಯನ್ನು ಬಳಸಿಕೊಂಡು ತತ್ವ ವಿವೇಚನೆ ಮಾಡುವುದು ಇವುಗಳ ಮುಖ್ಯ ಆಶಯವಾಗಿದೆ. ಹಲವು ಸ್ಥಲಗಳ ಅಡಿಯಲ್ಲಿ ವಚನಗಳನ್ನು ವಿಭಜಿಸಲಾಗಿದೆ. ಗಾತ್ರದಲ್ಲಿ ಚಿಕ್ಕವಾಗಿರುವ ವಚನಗಳು ಸರಳವಾಗಿವೆ. ಕೆಲವು ಬೆಡಗಿನ ಭಾಷೆಯಲ್ಲಿವೆ. ವ್ಯಾಪಾರ ಪದ್ಧತಿ, ಸುಂಕ ಪದ್ಧತಿ, ಸರಕು ಸಾಗಾಣಿಕೆಯ ಸಾಧನಗಳನ್ನು ಕುರಿತ ವಿವರಣೆಗಳನ್ನೊಳಗೊಂಡ ವಚನಗಳು ಸಾಂಸ್ಕೃತಿಕ ದೃಷ್ಟಿಯಿಂದ ಮಹತ್ವದವೆನಿಸಿವೆ.*

**Keywords:** *ಶಿವಶರಣರು, ಸುಂಕದ ಬಂಕಣ್ಣ, ಸುಂಕಿಗ, ಭಕ್ತಿ ಸುಂಕ.*

## ಪೀಠಿಕೆ

ಸುಂಕದ ಬಂಕಣ್ಣ ಸುಂಕಿಗನಾಗಿ ವೃತ್ತಿಯನ್ನು ಮಾಡುತ್ತಿದ್ದವನು. ಈತನ ವಚನಗಳ ಅಂಕಿತ ಬಂಕೇಶ್ವರ ಲಿಂಗ. ಈತನ ಕುರಿತ ಉಲ್ಲೇಖಗಳು, ವಿವರಗಳು ಗಣಸಹಸ್ರನಾಮ, ಬಸವಪುರಾಣ, ಶಿವತತ್ವಚಿಂತಾಮಣಿ ಗ್ರಂಥಗಳಲ್ಲಿ ದೊರೆಯುತ್ತವೆ. ಈತನ ವಚನಗಳು ಗಾತ್ರದಲ್ಲಿ ಸಣ್ಣ ಮತ್ತು ದೊಡ್ಡ ಪ್ರಮಾಣಗಳಿಂದ ಕೂಡಿವೆ. "ಆ ಕಾಲದ ವ್ಯಾಪಾರ ಪದ್ಧತಿ, ಸುಂಕಪದ್ಧತಿ, ಮಾರ್ಗಪದ್ಧತಿ ಹಾಗೂ ಸರಕು ಸಾಗಾಣಿಕೆಯ ಸಾಧನಗಳನ್ನು ತಿಳಿಸುವ ಈ ವಚನಗಳಿಗೆ ಸಾಂಸ್ಕೃತಿಕ ಮಹತ್ವವಿದೆ. ಇದಲ್ಲದೆ ಶಿವಶರಣರ ಸ್ತುತಿ, ದೈವಸಾಕ್ಷಾತ್ಕಾರ, ಪರಮಾತ್ಮನ ಸ್ವರೂಪ ಮೊದಲಾದ ವಿಷಯಗಳನ್ನು ಇಲ್ಲಿಯ ವಚನಗಳು ತಿಳಿಸುತ್ತವೆ". (ಹಿರೇಮಠ, ಬಿ.ಆರ್.)

ಸುಂಕದ ಬಂಕಣ್ಣನನ್ನು ಕುರಿತಂತೆ ಶಾಂತಲಿಂಗದೇಶಿಕಕೃತ ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರ ಭಾಗ ಒಂದರಲ್ಲಿ (ಆರ್.ಸಿ.ಹಿರೇಮಠ, ಎಂ.ಎಸ್.ಸುಂಕಾಪುರ ಸಂಪಾದಿತ ಕೃತಿ) ಕಥಾವಿವರಗಳು ದೊರೆಯುತ್ತವೆ. "ಸುಂಕದ ಬಂಕಣ್ಣನು ಬಿಜ್ಜಳರಾಯನ ಸುಂಕದ ಬಗೆಯಲ್ಲಿ ಹನ್ನೆರಡು ಸಾವಿರ ಹೊನ್ನನ್ನು ಕೊಡಬೇಕೆಂದು ನಿರ್ಬಂಧ ವಿಧಿಸಲು, ಶಿವಭಕ್ತನ ಅಂಗಡಿಯೊಳಗೆ ಲಿಂಗದ ಪ್ರತಿಜ್ಞೆಯನ್ನಿಟ್ಟು ಹೊನ್ನನ್ನು ತೆಗೆದುಕೊಂಡು ಬಿಜ್ಜಳನಿಗೆ ಕೊಡುತ್ತಾನೆ. ಬಸವಣ್ಣನಲ್ಲಿ ಹೊನ್ನನ್ನು ತೆಗೆದುಕೊಂಡು ಬಂದು, ಆ ಭಕ್ತನಿಗೆ ಕೊಡುವೆನೆಂದು ಸುಂಕದ ಬಂಕಯ್ಯ ಉರವಣಿಸಿ ಬರುತ್ತಿರುತ್ತಾನೆ. ಮುಂದೆ ಕಲಕೇತ ಬೊಮ್ಮಯ್ಯ ಸಿಕ್ಕಾಗ ಶರಣು ಎನ್ನುತ್ತಾನೆ. ಕಲಕೇತ

***Please cite this article as:*** ಶಶಿಕಲಾ, ಎಸ್.ಡಿ. (2024). ಶರಣ ಸುಂಕದ ಬಂಕಣ್ಣನ 'ಭಕ್ತಿ ಸುಂಕ'ದ ಸ್ವರೂಪ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್,* 3(4), 40–46

ಬೊಮ್ಮಯ್ಯ 'ಎಲ್ಲಿಗೆ ಪೋದೆಹೆ ಬಂಕಯ್ಯ' ಎನಲು, 'ಬಸವಣ್ಣನಲ್ಲಿಗೆ ಧನವ ತರುವುದಕ್ಕೆ ಪೋಗುತ್ತಿದ್ದೇನೆ' ಎನ್ನುತ್ತಾನೆ. 'ಬಲುಧನಿಕನೆ' ಎಂದು ಕಲಕೇತ ಬೊಮ್ಮಯ್ಯ ಕೇಳಿದಾಗ 'ಧನಿಕನಲ್ಲದೆ ತಿರುಕನೆ' ಎನಲು, ಕಲಕೇತಯ್ಯ ತನ್ನ ಕೈಯಲ್ಲಿದ್ದ ತಗರ ಕೋಡನಲ್ಲಾಡಲು, ಹೊನ್ನರಾಶಿ ಸುರಿಯುವುದನ್ನು ಕಂಡು, ಬಂಕಯ್ಯ ಬಸವಣ್ಣನಲ್ಲಿಗೆ ಹೋಗೆ 'ಹೊನ್ನ ಹೊರುವದಕ್ಕೆ ಆಳ ಕೊಡು ಬಸವಣ್ಣ' ಎನಲು ಪೂರ್ವ ವೃತ್ತಾಂತವನ್ನು ಕೇಳಿ ಬಸವಣ್ಣ ಬೆರಗಾಗುತ್ತಾನೆ. ಬಸವಣ್ಣ ಕಲಕೇತಯ್ಯಂಗೆ ಬಂದೆಱಗಿ ಸ್ತೋತ್ರವನ್ನು ಮಾಡುತ್ತಾನೆ.

ಇತ್ತ ಬಂಕಯ್ಯನು ಆ ದ್ರವ್ಯವನ್ನು ತಂದು ತಾವಾಡಿದ ಹೊತ್ತಿಗೆ ಹೊನ್ನನ್ನು ಭಕ್ತನಿಗೆ ಇತ್ತು ಲಿಂಗದ ಪ್ರತಿಜ್ಞೆಯ ಒಳ್ಳಿತೆನಿನ ಸುಂಕವ ಮಾಡುತ್ತಿದ್ದು, ಸುಂಕದ ಬಂಕಯ್ಯನು ಬಂಕೇಶ್ವರನೆಂಬ ತಮ್ಮಿಷ್ಟಲಿಂಗದಲ್ಲಿ 'ಭಕ್ತಿ ಸುಂಕ'ವನ್ನು ಒಪ್ಪಿಸಿ ಶಿವನಲ್ಲಿ ಬೆಱದು ಸುಖದಲ್ಲಿದ್ದನು."

**ಭವಿಗೂ ಭಕ್ತನಿಗೂ ಇರುವ 'ವ್ಯತ್ಯಾಸ' : ಸುಂಕದ ಪರಿಕಲ್ಪನೆಯ ಪರಿ**

ಭವಿಗಳ ಸುಂಕ ಎತ್ತು, ತೊತ್ತು, ಬಂಡಿ, ಬಲ್ಲೆತ್ತು – ಇವು ಲೌಕಿಕದ ವಸ್ತು. ಶರಣನಾದವನು ತಾನು ತೆರಲಿರುವ ಸುಂಕದ ವ್ರತನೇಮಕ್ಕೆ ತಪ್ಪದಿರುವುದು. ಲಿಂಗಪ್ರಮಾಣವೇ ಅದಕ್ಕೆ ಸಾಕ್ಷಿ. ಭಕ್ತರಾಗಿ ಕಳವು, ಹಾದರ ಮಾಡದೆ ಮಿಕ್ಕ ಯಾವುದೂ ಬೇಡ ಎಂದು ಮಾಡಿದ ಪ್ರಮಾಣ ವಿಶೇಷವಾದ ಶುದ್ಧಿ. ಬಂಕೇಶ್ವರನಿಗೆ ಸಲ್ಲಿಸಬೇಕಾದ ಸುಂಕ ಈ ವಿಶುದ್ಧಿಯದು. ಆಗ ಆತ ಒಲಿಯುತ್ತಾನೆ.

*"ಎಲ್ಲರ ಸುಂಕ, ಎತ್ತು ತೊತ್ತು ಬಂಡಿ ಬಲ್ಲೆತ್ತು*
*ಎನ್ನ ಸುಂಕ ಎಲ್ಲರ ಪರಿಯಲ್ಲ*
*ಕಟ್ಟಿದ ಕುರುಹಿಂಗೆ ಹಿಡಿದ ವ್ರತನೇಮ ನಿತ್ಯಕ್ಕೆ*
*ತಪ್ಪಲಿಲ್ಲಾಯೆಂದು ಕೊಟ್ಟ ಚೀಟ ಸಿಕ್ಕಿಸಿದೆ ನಿಮ್ಮಂಗದಲ್ಲಿ*
*ಭಕ್ತರಾಗಿ ಕಳವು ಹಾದರ ಮಿಕ್ಕಾದೊಂದೂ ಬೇಡ*
*ಎಂದು ಕೊಟ್ಟ ಚೀಟು ವಿಶುದ್ಧಿ*
*ಜಗದ ಸುಂಕದೊಡೆಯ ಬಂಕೇಶ್ವರಲಿಂಗನು"*

ಇಡೀ ಜಗತ್ತಿನ ಸುಂಕವನ್ನು ಪಡೆಯುವವನು ಬಂಕೇಶ್ವರನು ಲಿಂಗ ಅದನ್ನು ಅವನು ಭಕ್ತರ ವ್ರತನೇಮದ ಮೂಲಕ ಪಡೆಯುತ್ತಾನೆ.

**ಸುಖ ಎಂಬುದು ದುಃಖದ ಮೂಲ**

ದುಃಖ ಎಂಬುದು ಸುಖದ ಒಡಲಿನಲ್ಲಿಯೇ ಇದೆ. ಸುಖ – ದುಃಖಗಳೆರಡೂ ಕಾಲನ ಸುಂಕಕ್ಕೆ ಒಳಗಾಗುವಂಥದು. ಇಲ್ಲಿ 'ಕಾಲ' ಎಂದರೆ ಋತುಚ ಅಲ್ಲ, ಕಾಲ ಎಂದರೆ ಯಮ, ಕಾಲ ಎಂದರೆ ಸಾವು ಎಂದರ್ಥ. ಸುಖದುಃಖಗಳಿಂದಾಗಿ ಮನುಷ್ಯ ಸಾವಿಗೆ ಸಮೀಪವಾಗುತ್ತಾನೆ. ಸುಖ–ದುಃಖಗಳಿಗೆ ಒಳಗಾಗುವ ಮನುಷ್ಯನ ಗುಣದ ಪರಿಣಾಮವೆಂದರೆ ಬಂಕೇಶ್ವರಲಿಂಗದಲ್ಲಿ ಒಬ್ಬರೂ ಒಳಗಾಗದೆ ಇರುವ ವಿಪರ್ಯಾಸವಾಗಿರುವಂಥದು.

*"ಸುಖವ ನಿಶ್ಚೈಸಲಿಲ್ಲ. ಅದು ದುಃಖಕ್ಕೆ ಬೀಜ*
*ದುಃಖವ ನಿಶ್ಚೈಸಲಿಲ್ಲ. ಸುಖದೊಡಲು*
*ಸುಖದುಃಖವೆರಡು ಕಾಲದ ಸುಂಕಕ್ಕೆ ಒಳಗು*
*ಬಂಕೇಶ್ವರಲಿಂಗದೊಳಗೆ ಒಬ್ಬರೂ ಇಲ್ಲ"*

ಸುಖದುಃಖಗಳಾಚೆಗೆ ಜಿಗಿದಾಗ ಮಾತ್ರ ಶಿವ ಮನುಷ್ಯನ ಸಮೀಪವಾಗುತ್ತಾನೆ. ಮುಖ್ಯವಾಗಿ ಬಂಕಣ್ಣನ ಆಕ್ಷೇಪವೆಂದರೆ ಜನ ಬಂಕೇಶ್ವರಲಿಂಗದಲ್ಲಿ ಭಕ್ತಿಯನ್ನು ತಾಳದೆ ಸುಖದುಃಖಗಳನ್ನೇ ತಮ್ಮ ಜೀವ–ಜೀವನವನ್ನೇ ಯಮನಿಗೆ ಸುಂಕವಾಗಿ ಕಟ್ಟುತ್ತಿದ್ದಾರೆ ಎಂಬುದು. ಬಂಕಣ್ಣನಿಗೆ ಮನುಷ್ಯನ ಈ ಬಗೆಯ ನಡಾವಳಿ ಕುರಿತು ವಿಷಾದವಿದೆ.

**ಉಭಯ : ಅಂತರಂಗ–ಬಹಿರಂಗ**

'ಉಭಯ'ದ ಪರಿಕಲ್ಪನೆಯ ಬಗ್ಗೆ ಬಂಕಣ್ಣ ತನ್ನದೇ ಆದ ವಿಚಾರಗಳನ್ನು ಮಂಡಿಸುತ್ತಾನೆ. ಅಂತರಂಗ–ಬಹಿರಂಗ, ಲೌಕಿಕ–ಪರಮಾರ್ಥಗಳನ್ನು ಸ್ತ್ರೀ ಪ್ರತಿಮೆಗಳ ಮೂಲಕ ಬಂಕಣ್ಣ ತಿಳಿಸುತ್ತಾನೆ. ಇದು ದ್ವೈತದ ಪರಿಕಲ್ಪನೆ ಕೂಡಾ ಆಗಿದೆ.

***"ಫಳ ಒಳಗೆ ಕೊಳೆತು, ಹೊರಗೆ ಈಡಾದಡೆ***
***ಮೆಲುವರಿಗೆ ಅಡಹೆ?***
***ಹೊರಗೊಣಗಿ, ಒಳಗೆ ಫಳ ರಸಭರಿತವಾಗಿ,***
***ಭುಂಜಿಸುವರ ಅಂಗ ಮನೋಹರವಾಗಿಪ್ಪುದು.***
***ಲೌಕಿಕ ಪರಮಾರ್ಥಂಗಳ ಭೇದ***
***ಉಭಯ ರೂಪು ನಿಬದ್ಧಿಯಾದಲ್ಲಿ***
***ಬಂಕೇಶ್ವರ ಲಿಂಗವು ಎಂತಿದ್ದಡೇನು?"***

ಹಣ್ಣು ಒಳಗೆ ಕೊಳಕು ಹೊರಗೆ ಚೆನ್ನಾಗಿದ್ದರೆ ಸೇವಿಸುವವರಿಗೆ ಸಮೃದ್ಧಿಯೆ? ಅಂದರೆ ಅಂತರಂಗವನ್ನು ಮಲಿನವಾಗಿಸಿಕೊಂಡು ನೋಡುವುದಕ್ಕೆ ಚೆನ್ನಾಗಿದ್ದರೆ ಅವನೊಂದಿಗೆ ಬೆರೆಯುವವರಿಗೆ, ಒಡನಾಡುವವರಿಗೆ ಸಂತೋಷವೆ? ಎಂದು ಪ್ರಶ್ನಾರ್ಥಕವಾಗಿ ಕೇಳುವ ಬಂಕಣ್ಣನಿಗೆ 'ಇಲ್ಲ' ಎಂಬ ಉತ್ತರವೇ ಸಿಗುತ್ತದೆ. ಹೊರಗೆ ಒಣಗಿ ಒಳಗೆ ಫಳ(ಹಣ್ಣು), ರಸಭರಿತವಾಗಿದ್ದರೆ ಸೇವಿಸುವವರ ಅಂಗ (ನಾಲಗೆ–ಮಾತು) ಮನೋಹರವಾಗಿರುತ್ತದೆ.

ಲೌಕಿಕವೆಂಬುದು ಒಳಗೆ ಕೊಳೆತ ಹೊರಗೆ ಚೆನ್ನಾಗಿ ಕಾಣುವ ಹಣ್ಣಿನಂತೆ. ಆದರೆ ಮನುಷ್ಯರಿಗೆ ಅದರಿಂದ ಸಂತೋಷವಿರುವುದಿಲ್ಲ. ಪರಮಾರ್ಥ ಎಂಬುದು ಒಳಗೆ ರಸಭರಿತವಾಗಿರುವ ಹೊರಗೆ ಒಣಗಿರುವ ಹಣ್ಣಿನಂತೆ. ಇದನ್ನು ಸೇವಿಸುವವರ ಅಂಗ ಮನೋಹರವಾಗಿರುತ್ತದೆ. ಲೌಕಿಕ ಮತ್ತು ಪರಮಾರ್ಥ ಇವು ಉಭಯ, ಬೇರೆ ಬೇರೆ. ಇವೆರಡೂ ಒಂದೇ ಆದರೆ ಬಂಕೇಶ್ವರ ಲಿಂಗ ಎಂತಿದ್ದಡೇನು? ಎಂದು ಬಂಕಣ್ಣ ತೀಕ್ಷ್ಣವಾಗಿ ನುಡಿಯುತ್ತಾನೆ. ಏಕೆಂದರೆ ಲೌಕಿಕ ಕೊಳೆತ ಹಣ್ಣಿನಂತೆ. ಪರಮಾರ್ಥ ರಸಭರಿತವಾದ ಹಣ್ಣಿನಂತೆ.

**ಉಭಯ ನಾಮನಷ್ಟ**

ಅಂತರಂಗ – ಬಹಿರಂಗಗಳ ಉಭಯದ ಶುದ್ಧಿಯನ್ನು ಹೇಳುವ ಬಂಕಣ್ಣ ಅದಕ್ಕೆ ಬೇಕಾದ ಶ್ರದ್ಧೆಯ ಅಗತ್ಯವನ್ನು ಹೇಳುತ್ತಾನೆ.

***"ನಡೆದಾಚರಿಸೂದಕ್ಕೆ ಕ್ರೀ, ಅದು ಲೇಪವಾಗಿ ನಿಂದಲ್ಲಿ***
***ಉಭಯ ನಾಮನಷ್ಟ.***
***ಅದ ಭಾವಿಸುವ ಭಾವ, ತೆರದರಿಸಿನವಾದಲ್ಲಿ ವಿರಕ್ತಿ ಭಾವ***
***ಬಂಕೇಶ್ವರ ಲಿಂಗವನರಿವುದಕ್ಕೆ ಶ್ರದ್ಧೆಯ ಭಿತ್ತಿ"***

ನಡೆಯುವ ಬಗೆಯನ್ನು ಆಚರಿಸಿ, ಕೃತಿರೂಪದಲ್ಲಿ ತಂದರೆ ಅದು ಕ್ರಿಯೆ ಎನಿಸುವುದು. ಅದು ಬರಿಯ ತೋರಿಕೆಯಾದಲ್ಲಿ ಅದು ಶ್ರದ್ಧೆಯಿಲ್ಲದ ಆಚರಣೆಯಾಗಿ ಉಭಯನಾಮನಷ್ಟವಾಗುತ್ತದೆ. ಹಾಗಾಗಿ ಅಂತರಂಗ–ಬಹಿರಂಗ ಒಂದೇ ಆಗಿರಬೇಕು. ಬಂಕೇಶ್ವರ ಲಿಂಗವನರಿಯುವುದಕ್ಕೆ ಶ್ರದ್ಧೆಯ ಭಿತ್ತಿ ಅಗತ್ಯ ಎಂಬುದು ಬಂಕಣ್ಣನ ಕಳಕಳಿಯಾಗಿದೆ.

**ದಯೆ ಮತ್ತು ಹಿತ**

ಉಭಯದ ಕಲ್ಪನೆಯನ್ನು ದಯೆ ಮತ್ತು ಹಿತ ಎಂಬ ಮನುಷ್ಯನ ಎರಡು ಸ್ವಭಾವಗಳಿಗೆ ಬಂಕಣ್ಣ ವಿಸ್ತರಿಸುತ್ತಾನೆ.

***"ಸರ್ವಜೀವಕ್ಕೆ ದಯವೆ ಮೂಲಮಂತ್ರ***
***ಸರ್ವರ ಭೂತಹಿತವೆ ದಿವ್ಯಜ್ಞಾನ***
***ಇಂತೀ ಉಭಯವನರಿತಲ್ಲಿ ಸದಮಲಪೂಜೆ***
***ಹೀಗಲ್ಲದೆ ಬೆನ್ನ ತಡಹಿ, ಅನ್ನವನಿಕ್ಕಿ***
***ತಿನ್ನು, ಕೊಲ್ಲು ಎಂಬವನ ಪೂಜೆ***
***ಅವನನ್ನದ ಹಿರಣ್ಯದ ಒದಗು***
***ಅವನ ಮಾಟದ ಮರುಳಾಟ, ಏತದ ಕೂನಿಯ ಘಾತದ ವೆಜ್ಜದಂತೆ***
***ಅವನ ನೀತಿಯ ಇರವು, ಬಂಕೇಶ್ವರಲಿಂಗಾ"***

ಸರ್ವಜೀವಗಳಿಗೂ ದಯವೇ ಮೂಲಮಂತ್ರವಾಗಿ ಅವರಲ್ಲಿ ನೆಲಸಿರಬೇಕು. ಸರ್ವರಲ್ಲಿ ನೆಲೆಯಾಗಿರುವ (ಭೂತಕಾಲ) ಹಿತವೆ ದಿವ್ಯಜ್ಞಾನವಾಗಿರುತ್ತದೆ. ದಯ ಮತ್ತು ಹಿತ ಎಂಬ ಈ ಉಭಯವನ್ನರಿತರೆ ಅದೇ ಕಲ್ಮಶವಿಲ್ಲದ ಶ್ರೇಷ್ಠ ಪೂಜೆ. ಹೀಗೆ ಮಾಡದೆ ಬೆನ್ನು ಸವರಿ, ಅನ್ನವನು

ನೀಡಿ ಸಂತೈಸಿ ತಿನ್ನು, ಕೊಲ್ಲು ಎಂಬುವವನ ಪೂಜೆ ರಾಕ್ಷಸತ್ವಕ್ಕೆ ಸಮನಾದದ್ದು. ಅಂಥವನ ಕ್ರಿಯೆ, ಆಚರಣೆ ಮರುಳಾಟವಾಗಿರುತ್ತದೆ ಮತ್ತು ನೀರೆತ್ತುವ ಸಾಧನವಾದ ಏತದ ಹೊಡೆತಕ್ಕೆ ತೂತು ಉಂಟಾಗಿ ಅಪಾಯ ಉಂಟಾದಂತೆ ಅವನ ನೀತಿಯ ಇರುವಿಕೆಯಾಗುತ್ತದೆ. ಏತದ ತೂತಿನಿಂದ ನೀರು ಸೋರಿದಂತೆ ತಿನ್ನು, ಕೊಲ್ಲು ಎಂಬುದು ಅವನ ಇಬ್ಬಗೆಯ ನೀತಿಯಾಗುತ್ತದೆ.

**ವೈರಿಗಳು ಮತ್ತು ಕೂಪರು (ಹಿತವರು)**

ಬಂಕಣ್ಣ ಉಭಯದ ಕಲ್ಪನೆಯನ್ನು ವೈರಿಗಳು ಮತ್ತು ಕೂಪರು ಎಂಬ ನೆಲೆಯಲ್ಲಿ ಪರಿಭಾವಿಸಿ ಇದರ ವ್ಯಾಪ್ತಿಯನ್ನು ಹಿಗ್ಗಿಸಿದ್ದಾನೆ.

***"ಮನ ಬುದ್ಧಿಚಿತ್ತ ಅಹಂಕಾರವೆಂಬಿತ್ತು ತನಗೆ ವೈರಿಗಳು***
***ನಿರ್ಮಲ ಸುಚಿತ್ತ ದಿವ್ಯಜ್ಞಾನವೆ ತನಗೆ ಕೂಪರು***
***ಮರೆದಡೆ ಹಗೆ.***
***ತನ್ನ ತಾನರಿತಡೆ, ತನ್ನಯ ಪರಿಸ್ಪಂದ ದಿವ್ಯಜ್ಞಾನ***
***ಇಂತೀ ಉಭಯವ ತಿಳಿ, ಬಂಕೇಶ್ವರ ಲಿಂಗದಲ್ಲಿ"***

ಮನದ ಅಹಂಕಾರ, ಬುದ್ಧಿಯ ಅಹಂಕಾರ, ಚಿತ್ತದ ಅಹಂಕಾರವೇ ಮೊದಲಾದ ಇಪ್ಪತ್ತು ಸಂಗತಿಗಳು ವೈರಿಗಳು. ನಿರ್ಮಲವಾದ ಸುಚಿತ್ತ, ದಿವ್ಯಜ್ಞಾನ ಇವು ಹಿತವಾದಂಥವು. ತನ್ನನ್ನು ತಾನು ಅರಿತರೆ ಅದೇ ಅವನಿಗೆ ದಿವ್ಯಜ್ಞಾನ. ಈ ಭೇದವನ್ನು ಅರಿತು ಬದುಕಬೇಕು. ಆಗ ಬಂಕೇಶ್ವರನಲ್ಲಿ ಧ್ಯಾನಸ್ಥನಾಗಲು ಸಾಧ್ಯ ಎಂಬುದು ವಚನಕಾರನ ಆಶಯವಾಗಿದೆ.

**ಮನುಷ್ಯನ ಆಸೆಗಳು**

ಮನುಷ್ಯನ ಆಸೆಗಳೇ ಮನುಷ್ಯನನ್ನು ನುಂಗುತ್ತವೆ, ತಿಂದು ಹಾಕುತ್ತವೆ. ಮನುಷ್ಯನನ್ನು – ಅವನ ಬದುಕನ್ನು ನಾಶ ಮಾಡುತ್ತವೆ. ಆದರೆ ಬಂಕೇಶ್ವರಲಿಂಗವನ್ನರಿಯುವಲ್ಲಿ ಮನಸ್ಸನ್ನು ನೆಟ್ಟರೆ ಆ ಶಿವಾನುಭವವೇ ಮನುಷ್ಯನ ಮನಸ್ಸನ್ನು ಆವರಿಸುತ್ತದೆ.

***"ಶೋಣಿತವ ಮುತ್ತಿದ ನೊಣನ, ಆ ಶೋಣಿತವೇ ತಿಂದಿತ್ತು***
***ಅಡಗ ತಿಂಬ ಕುಕ್ಕುರನ, ಆ ಅಡಗೇ ತಿಂದಿತ್ತು***
***ಇಷ್ಟವನರಿವ ಚಿತ್ತವನು, ಆ ಇಷ್ಟವೇ ತಿಂದಿತ್ತು***
***ಬಂಕೇಶ್ವರಲಿಂಗವನರಿವ ಮನವ, ಅದು ತಾನೆ ಅವಗವಿಸಿತ್ತು"***

ರಕ್ತವನ್ನು ಮುತ್ತಿದ ನೊಣವನ್ನು ಆ ರಕ್ತವೇ ತಿಂದಿತ್ತು. ಮಾಂಸವನ್ನು ತಿನ್ನುವ ನಾಯಿಯನ್ನು ಮಾಂಸವೇ ತಿಂದಿತ್ತು. ಇಷ್ಟವನ್ನರಿಯುವ ಮನಸ್ಸನ್ನು ಆ ಇಷ್ಟವೇ ತಿಂದಿತ್ತು. ಆದರೆ ಬಂಕೇಶ್ವರ ಲಿಂಗವನ್ನರಿಯುವ ಮನಸ್ಸನ್ನು ಅದೇ ಆವರಿಸಿತ್ತು. ಮನುಷ್ಯನ ಮನಸ್ಸು ಯಾವುದನ್ನು ಅಪೇಕ್ಷಿಸುತ್ತದೋ ಅದೇ ಅವನನ್ನು ಆವರಿಸುತ್ತದೆ. ಹಾಗಾಗಿ ಆತ ಒಳ್ಳೆಯದನ್ನು ಬಯಸಿದರೆ ಒಳ್ಳೆಯದೇ ಅವನ ಮನಸ್ಸನ್ನು ಆವರಿಸುತ್ತವೆ. ಚಂಚಲತೆಯನ್ನು ಮನುಷ್ಯ ಅಪೇಕ್ಷಿಸಿದರೆ ಅವನ ಮನಸ್ಸು ಅಂತೆಯೇ ಆಗುತ್ತದೆ. ಅವನ ಅಪೇಕ್ಷೆ ಶಿವನೆಡೆಗೆ ಇದ್ದರೆ ಶಿವಾನುಭವ ಅವನದೇಹ–ಮನಸ್ಸುಗಳನ್ನು ಆಕ್ರಮಿಸುತ್ತದೆ.

ಇಷ್ಟವಾದ ಆಸೆಗಳೆಡೆಗೆ ಮನುಷ್ಯನ ಮನಸ್ಸು ವಾಲಿದರೆ ಆ ಆಸೆಗಳೇ ಅವನನ್ನು ನಾಶಮಾಡುತ್ತವೆ. ಹಾಗಾಗಿ ಆಸೆಗಳಿಗೆ ಅವಕಾಶ ಮಾಡಿಕೊಡಬಾರದು. ಅವುಗಳನ್ನು ಬಯಸಿದಷ್ಟೂ ಅದು ಮನುಷ್ಯನ ಸರ್ವನಾಶಕ್ಕೆ ಕಾರಣವಾಗುತ್ತವೆಯೆಂದು ಬಂಕಣ್ಣ ನಿವೇದಿಸುತ್ತಾನೆ.

***"ಹೊಲದೊಳಗೊಂದು ಹುಲ್ಲೆ, ಮರಿಯನೀದು, ಲಲ್ಲೆಯಿಂದ ನೆಕ್ಕುತ್ತಿರಲಾಗಿ***
***ಅದು ಹುಲಿಯ ಮರಿಯಂತಾಯಿತ್ತೆಂದು***
***ತನ್ನ ಹೊಲಬಿಗೆ ತೋರಿ ಲಲ್ಲೆಯ ಬಿಟ್ಟಿತ್ತು***
***ಬಿಟ್ಟುದನರಿದು, ಆ ಮರಿ ಹುಲಿಯಾಗಿ ಹುಲ್ಲೆಯ ತಿಂದಿತ್ತು***
***ಬಂಕೇಶ್ವರ ಲಿಂಗ, ಎನ್ನಯ ಶಂಕೆಯ ಹೇಳಯ್ಯ"***

ಹುಲಿಯೊಂದು ಮರಿಗೆ ಜನ್ಮ ನೀಡಿ ಪ್ರೀತಿಯಿಂದ ನೆಕ್ಕುತ್ತಿರುವಾಗ ಜ್ಞಾನೋದಯವಾಗಿ ಅದು ಹುಲಿಯ

ಮರಿಯಂತಾಗುತ್ತದೆಂದು ಅದು ಅತಿಯಾದ ತನ್ನ ಪ್ರೀತಿ ತೋರುವುದನ್ನು ಬಿಟ್ಟಿತ್ತು. ಹೀಗೆ ಬಿಟ್ಟದ್ದನ್ನರಿತ ಆ ಹುಲ್ಲೆಯ ಮರಿ ಹುಲಿಯಾಗಿ ತಾಯಿ ಹುಲ್ಲೆಯನ್ನು ತಿಂದಿತ್ತು. – ಇದು ಏನನ್ನು ಹೇಳುತ್ತದೆ ಎಂಬ ಶಂಕೆ ನನ್ನಲ್ಲಿ ಹುಟ್ಟಿದೆ, ಆ ಸಂದೇಹವನ್ನು ನಿವಾರಿಸು ಎಂದು ಬಂಕೇಶ್ವರ ಲಿಂಗಕ್ಕೆ ಬಂಕಣ್ಣ ನಿವೇದಿಸಿಕೊಳ್ಳುತ್ತಾನೆ. ಮನುಷ್ಯ ಆಸೆಗಳ ಮೋಹಿಸುವುದನ್ನು ಬಿಡಬೇಕೆಂಬ ಆಶಯವನ್ನು ಬಂಕಣ್ಣ ವ್ಯಕ್ತಪಡಿಸಿದ್ದಾನೆ.

### ಪ್ರಾಮಾಣಿಕತೆ ಮತ್ತು ಸುಂಕಪದ್ಧತಿ

ಹನ್ನೆಡನೆಯ ಶತಮಾನದಲ್ಲಿನ ರಾಜರ ಆಳ್ವಿಕೆಯ ಪದ್ಧತಿ, ವರ್ಣಾಶ್ರಮವಿದ್ದಾಗಲೂ ಸುಂಕದಿಂದ ವಿನಾಯಿತಿ ಇದ್ದ ಬಗೆ, ಸುಂಕದಿಂದ ತಪ್ಪಿಸಿಕೊಳ್ಳಲು ಮಾಡುತ್ತಿದ್ದ ಕುಟಿಲೋಪಾಯಗಳು – ಇವುಗಳ ವಿಡಂಬನೆಯನ್ನು ಬಂಕಣ್ಣ ಮಾಡಿದ್ದಾನೆ.

> ***"ಊರ ಹೊರಗಣ ಹೊಲೆಯರ ಮನೆಯಲ್ಲಿ ಈರೈದು ಮಗ್ಗ***
> ***ಆ ಮಗ್ಗಕ್ಕೆ ಒಬ್ಬನೆ ಹಾರುವ ನೈವಾತ***
> ***ಆ ಮಗ್ಗದೊಳಗಿದ್ದು ಸುಂಕಕಂಜಿ ಹೊಲೆಯನಾದ***
> ***ಬಂಕೇಶ್ವರ ಲಿಂಗವನರಿಯದೆ"***

ಬಹಳ ಹಿಂದಿನ ಕಾಲ ಮತ್ತು ಸಮಾಜದಲ್ಲಿ ತಳಸಮುದಾಯದವರ ಮನೆ ಊರ ಹೊರಗಿದ್ದು ಸಮಾಜದ ಶ್ರೇಣೀಕೃತ ವಿಭಜನೆಯನ್ನು ಹೇಳುತ್ತದೆ. ಆತನ ಮನೆಯಲ್ಲಿ ಈರೈದು (ಎರಡು+ಐದು= ಒಟ್ಟು ಹತ್ತು) ಮಗ್ಗಗಳನ್ನು ನೇಯುತ್ತಿರುವವನು ಒಬ್ಬನೇ ಬ್ರಾಹ್ಮಣ. ತೆರಿಗೆಗೆ ಅಂಜಿದ ಆ ಬ್ರಾಹ್ಮಣ ಊರಹೊರಗಿನ ಹೊಲೆಯರ ಮನೆಯಲ್ಲಿ ಮಗ್ಗ ನೇಯುತ್ತ ಹೊಲೆಯನೇ ಆಗುತ್ತಾನೆ. ಸುಂಕದ ಕಾರಣಕ್ಕೆ ಅನ್ಯಜಾತಿಯೊಂದಿಗೆ ತನ್ನನ್ನು ತಾನು ಗುರುತಿಸಿಕೊಳ್ಳುವ ಮನೋಧರ್ಮದ ವಿಡಂಬನೆ ಇಲ್ಲಿದೆ. ಮೇಲ್ಜಾತಿಯವರ ಸಮಯ ಸಾಧಕತನ, ಅಪ್ರಮಾಣಿಕತೆಯನ್ನು ಬಂಕಣ್ಣ ಇಲ್ಲಿ ಹೇಳುತ್ತಾನೆ.

### ವೈಶ್ಯರ ವಿಡಂಬನೆ – ಚಾರಿತ್ರ್ಯದ ಪ್ರಶ್ನೆ

ನಡೆ–ನುಡಿಗಳನ್ನು ಮುಖ್ಯವಾಗಿಟ್ಟುಕೊಂಡು ಮಾತಾಡುವ ಬಂಕಣ್ಣ ಪ್ರಾಮಾಣಿಕತೆಯ ಸ್ವರೂಪ ಹೇಗಿರಬೇಕೆಂಬುದನ್ನು ತಿಳಿಸುತ್ತಾನೆ.

> ***"ಭವಿ ಸಂಗವನೊಲ್ಲೆನೆಂದು, ಭವಿಗಳ ಮನೆಯಲ್ಲಿ ಉಣ್ಣೆನೆಂದು***
> ***ಭವಿಗಳಿಗೆ ಇಕ್ಕೆನೆಂದು, ಭವಿಪಾಕದ ಕ್ಷಾರ, ಕ್ರಮುಕ ಮಧುರ ತಿಲಚೂರ್ಣ***
> ***ಇವು ಮೊದಲಾದ ದ್ರವ್ಯಂಗಳ ಭಕ್ಷಿಸಿ, ಪ್ರೇತರ ಕೂಟವನೊಲ್ಲೆನೆಂಬ***
> ***ಜಗನೀತಿಯ ವರ್ತಕರುಗಳಿಗೆ ಅದೇತರ ಶೀಲ***
> ***ಬಂಕೇಶ್ವರ ಲಿಂಗದಲ್ಲಿ?"***

ವೀರಶೈವ ದೀಕ್ಷೆ ಪಡೆಯದ ಭವಿಸಂಗವನ್ನು ಮಾಡುವುದಿಲ್ಲ, ಅವರ ಮನೆಯಲ್ಲಿ ಊಟ ಮಾಡುವುದಿಲ್ಲ, ಅವರಿಗೆ ಊಟವನ್ನು ಬಡಿಸುವುದಿಲ್ಲ ಎಂದು ಹೇಳಿದ ಭಕ್ತ, ಭವಿ ಮಾಡಿದ ಅಡಿಗೆಯೊಂದಿಗೆ, ಅಡಿಕೆ, ಎಳ್ಳಿನ ಪುಡಿ ಮೊದಲಾದವನ್ನು ಸೇವಿಸಿ ಅಂಥ ದೆವ್ವಗಳ ಒಡನಾಟ ತನಗೆ ಬೇಡವೆನ್ನುವ ವರ್ತಕರಿಗೆ 'ಅದೇತರ ಶೀಲ ಬಂಕೇಶ್ವರನಲ್ಲಿ?' ಎಂದು ಬಂಕಣ್ಣ ವಿಡಂಬಿಸುತ್ತಾನೆ. ಭಕ್ತನ ವ್ಯಕ್ತಿತ್ವ, ನಡತೆ ಶುದ್ಧವಾಗಿರಬೇಕೆಮಬ ಆಶಯವನ್ನು ಬಂಕಣ್ಣ ಈ ವಚನದಲ್ಲಿ ವ್ಯಕ್ತಪಡಿಸಿದ್ದಾನೆ.

### ಮನುಷ್ಯನ ವ್ಯಕ್ತಿತ್ವದ ವಿಡಂಬನೆ

ಕಟುಭಕ್ತಿಯ ಸ್ವರೂಪವನ್ನು ಬಂಕಣ್ಣ ವಿಡಂಬನೆಯ ಮೂಲಕ ಹೆಳುತ್ತಾನೆ. ಭಕ್ತರ ಲಕ್ಷಣ ಯಾವ ಬಗೆಯಲ್ಲಿರಬೇಕೆಂಬುದನ್ನು ತಿಳಿಸುತ್ತಾನೆ.

> ***"ನಿಜ ನಿಶ್ಚಯವಾದಲ್ಲಿ ಚಿಲುಮೆ ಜಲ, ಸಕಲರುಚಿ.***
> ***ವಿಚ್ಛಂದವಾಗಿ ಬಯಕೆಯ ಬಿಟ್ಟುದೆ ಲವಣನಾಸ್ತಿ***
> ***ಸರ್ವಕರಣೇಂದ್ರಿಯಂಗಳ ಸಂಸರ್ಗಕ್ಕೆ***
> ***ಮನವನೀಯದಿದ್ದುದೆ ಭವಿವಿರೋಧ***
> ***ಉಚಿತ ತತ್ಕಾಲಂಗಳಲ್ಲಿ ಅಪ್ಯಾಯವನರಿತು ವಿಶ್ರಮಿಸೂದೆ***
> ***ಕೃತ್ಯದ ಕಟ್ಟಣೆ***

*ಮನಬಂದಂತೆ ನುಡಿದು, ತನುಬಂದಂತೆ ಆಡಿ,*

*ನಿಂದಿಹ ಸ್ಥಿತಿಯ ತಾನಾಡಿ, ಹಲಬರ ಕೈಯಲ್ಲಿ ಕೇಳಿ,*

*ಇಂತೀಗುಣಕ್ಕೆ ಒಪ್ಪಿ,*

*ಭಕ್ತನೆಂಬ ಕೃತ್ಯದ ಮತ್ತರನೊಪ್ಪ ಬಂಕೇಶ್ವರಲಿಂಗ"*

ಸರ್ವಕರಣೇಂದ್ರಿಯಗಳೆಂಬ ಪಂಚೇಂದ್ರಿಯಗಳ ಸಂಸರ್ಗಕ್ಕೆ ಮನವನ್ನು ಹರಿಯ ಬಿಡದಿದ್ದರೆ ಅದೇ ಭವಿವಿರೋಧವಾಗುತ್ತದೆ. ಅದಲ್ಲದೆ ಮನಸಿಲ್ಲಿ ಬಂದಂತೆ ನುಡಿದು, ದೇಹಬಂದಂತೆ ಆಡಿ ಹಲವರಿಂದ ಕೇಳಿಸಿಕೊಳ್ಳುವ ಗುಣವನ್ನು ಬಂಕೇಶ್ವರಲಿಂಗ ಒಪ್ಪುವುದಿಲ್ಲ. ಭಕ್ತನ ಲಕ್ಷಣ ಯಾವುದಲ್ಲ, ಯಾವುದು ಆಗಿರಬೇಕೆಂಬ ವಿಚಾರಗಳನ್ನು ಬಂಕಣ್ಣ ತಿಳಿಸಿದ್ದಾನೆ.

**ದೇಹ–ದೇಶ ಕುರಿತ ಚಿಂತನೆ**

ದೇಹವೆಂಬ ಸಾಮ್ರಾಜ್ಯವನ್ನು ಪಂಚೇಂದ್ರಿಯಗಳೆಂಬ ಅರಸು ಆಳುತ್ತಿದ್ದಾನೆ. ದೇಹವನ್ನು ನಾಶಪಡಿಸುವ ಗುಣಗಳು ಮನುಷ್ಯನನ್ನು ಆಳಿದರೆ ಅವನ ನಾಶ ಶತಸಿದ್ಧ ಎಂಬುದನ್ನು ಬಂಕಣ್ಣ ಹೇಳುತ್ತಾನೆ.

*"ಕ್ಷಯು ಕಾರಣವೆಂಬ ಪಟ್ಟಣಕ್ಕೆ, ಲಯ ಕಾರಣವೆಂಬ ಅರಸು*

*ಪೋಲಿಕಾರ ಪ್ರಧಾನ, ಮದೋನ್ಮತ್ತ ತಳವಾರ*

*ಇಂತೀ ಪಟ್ಟಣದರಸು, ಮರವೆಯ ಮಹಾರಾಜ್ಯವನು ಆಳುತ್ತಿರಲಾಗಿ*

*ಆತನ ಅಡಿಗೆರಗಿ ಅಂಜುವರಿಲ್ಲ*

*ಬಂಕೇಶ್ವರಲಿಂಗವ ಕಂಡರಿಯದ ಕಾರಣ"*

ಒಂದು ರಾಜ್ಯದ ಅರಾಜಕತೆಯೆಂಬಂತೆ ಮನುಷ್ಯನ ದೇಹವೆಂಬ ರಾಜ್ಯವನ್ನು ನಾಶಮಾಡಲು ಸಿದ್ಧವಾಗಿರುವ ಅರಸು ಎಂದರೆ ಪಂಚೇಂದ್ರಿಯಗಳು. ಮದನ್ಮೋತ್ತ ತಳವಾರ ಎಂದರೆ ಅಷ್ಟಮದಗಳು. ಜವಾಬ್ದಾರಿಗಳನ್ನು ಮರೆತು ರಾಜ್ಯವನ್ನಾಳುವ ಅರಸನಂತೆ ಜವಾಬ್ದಾರಿಗಳನ್ನು ಮರೆತ ಮನುಷ್ಯನನ್ನು ಪಂಚೇಂದ್ರಿಯಗಳು ಆಳುತ್ತವೆ. ಈ ಎಚ್ಚರದಲ್ಲಿದ್ದುಕೊಂಡು ಮನುಷ್ಯ ಪಂಚೇಂದ್ರಿಯಗಳಿಗೆ ಅಡಿಯಾಳಾಗದೆ ಬಂಕೇಶ್ವರಲಿಂಗದಲ್ಲಿ ಮನಸ್ಸನ್ನು ಲೀನಗೊಳಿಸಬೇಕು ಎಂಬ ಆಶಯ ಇಲ್ಲಿಯದು.

**ಪಂಚೇಂದ್ರಿಯಗಳು ಮತ್ತು ಪ್ರಾಣ**

*"ಹಸಿದುಂಬ ಅಣ್ಣಗಳೆಲ್ಲರೂ ಅಸುವಿನ ಘಾತಕ್ಕೊಳಗಾದರು*

*ಹಸಿ(ವೆ)ಯ ವಿಷಯಂಗಳಲ್ಲಿ ನಸಿದಾಡದೆ ಹುಸಿಯದೆ,*

*ಮರ್ತ್ಯರಂತೆ ಗಸಣೆಗೊಳ್ಳದೆ, ದಯದೆರಕದಲ್ಲಿರು*

*ಬಂಕೇಶ್ವರ ಲಿಂಗವನರಿವುದಕ್ಕೆ"*

ಪಂಚೇಂದ್ರಿಯಗಳ ಹಸಿವಿಗೆ, ದಾಹಕ್ಕೆ ಒಳಗಾದ ಸಂಸಾರಿಗಳು ಪ್ರಾಣಕ್ಕೆ ಕುತ್ತನ್ನು ತಂದುಕೊಂಡರು. ಆದ್ದರಿಂದ ಪಂಚೇಂದ್ರಿಯ ಸುಖಗಳಲ್ಲಿ ಸೊರಗದೆ, ಬಡವಾಗದೆ, ಹಾಳಾಗದೆ ಸಾಮಾನ್ಯ ಮನುಷ್ಯರಂತೆ ತೊಂದರೆಗೊಳಗಾಗದೆ ಬಂಕೇಶ್ವರಲಿಂಗವನರಿಯುವುದಕ್ಕೆ ಪ್ರೀತಿ–ದಯೆಯಲ್ಲಿರು ಎಂದು ಭಕ್ತರಿಗೆ ಬಂಕಣ್ಣ ತಿಳಿಯಪಡಿಸುತ್ತಾನೆ.

**ಶಿವಾನುಭವದ ದಾರಿ :**

*"ಎವೆಯ ಮುಚ್ಚಿ ಕಣ್ಣು ತೆರೆಯಬೇಕು*

*ಶರೀರವ ಗೆದ್ದು, ಜ್ಞಾನವನರಿಯಬೇಕು*

*ಜ್ಞಾನದ ಮರೆದು, ವಿಜ್ಞಾನ ಸುಜ್ಞಾನದಲ್ಲಿ ನಿಂದು*

*ಚಿದ್ಘನದಲ್ಲಿ ಚಿಚ್ಛಕ್ತಿಯ ಕೂಡಿ, ಚಿಚ್ಛಕ್ತಿ ನಷ್ಟವಾಗಿ ವಸ್ತುಲೇಪ*

*ದೃಕ್ಕಿಂಗೆ ಅಗೋಚರವಾಗಿ*

*ತತ್ವಮಸಿಯೆಂಬ ಭಿತ್ತಿಯ ಭಾವವಿತ್ತಲೆ*

*ಅತ್ತಲರಿ, ಬಂಕೇಶ್ವರಲಿಂಗವ"*

ಕಣ್ಣು ತೆರೆಯುವುದು ಮುಖ್ಯವಲ್ಲ. ಮನಸ್ಸಿನ ಒಳಗಣ್ಣು ತೆರೆಯಬೇಕು. ಶರೀರವಗೆದ್ದು – ದೇಹದ ಮೇಲಿನ ವ್ಯಾಮೋಹವನ್ನು ಗೆದ್ದು ಜ್ಞಾನವನ್ನು ಅರಿಯಬೇಕು. ಚಿತ್+ಘನ, ಚಿತ್–ಶಕ್ತಿ, ಕಣ್ಣಿಗೆ(ದೃಕ್ಕಿಂಗೆ–ದೃಶ್ಯಕ್ಕೆ) ಅಗೋಚರವಾದುದು. ಅಲ್ಲಿ ಆತ್ಮನ (ತತ್ವಮಸಿ) ಸ್ವರೂಪವೆಂಬ ಗೋಡೆಯ ಒಳಗೆ

ಬಂಕೇಶ್ವರನನ್ನು ಅರಿಯಬಹುದೆಂಬ ಮಾರ್ಗವನ್ನು ಬಂಕಣ್ಣ ಸೂಚಿಸುತ್ತಾನೆ.

ಒಟ್ಟಿನಲ್ಲಿ ಸುಂಕದ ಬಂಕಣ್ಣ ವೃತ್ತಿಯಲ್ಲಿ ಸುಂಕಿಗನಾಗಿದ್ದು 'ಸುಂಕ'ದ ಸ್ವರೂಪವನ್ನು ಬೇರೆ ಬೇರೆ ನೆಲೆಯಲ್ಲಿ ವಿಸ್ತರಿಸಿದ್ದಾನೆ. ಅಂತಿಮವಾಗಿ ಒಬ್ಬ ಭಕ್ತ ಶಿವನಿಗೆ ಸಲ್ಲಿಸುವ ಸುಂಕ ಭಕ್ತಿಯಸುಂಕವೇ ಆಗಿರಬೇಕೆಂಬ ನಿಲವಿಗೆ ಬಂಕಣ್ಣ ಬದ್ಧನಾಗಿ ತನ್ನ ವಚನಗಳ ಮೂಲಕ ಅದನ್ನು ಸಾದರಪಡಿಸುತ್ತಾನೆ.

**ಪರಾಮರ್ಶನ ಗ್ರಂಥಗಳು**


- ಹಿರೇಮಠ, ಆರ್. ಸಿ. ಎಂ. ಎಸ್. ಸುಂಕಾಪುರ. (ಸಂ.) (1968). *ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರ / ಶಾಂತಲಿಂಗದೇಶಿಕ.* ಕರ್ನಾಟಕ ವಿಶ್ವವಿದ್ಯಾಲಯ.
- ಹಿರೇಮಠ, ಆರ್.ಸಿ. (1968). *ಇಪ್ಪತ್ತೇಳು ಶಿವಗಶರಣೆಯರ ವಚನಗಳು.* ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
- ಕಲಬುರ್ಗಿ, ಎಂ.ಎಂ. (ಸಂ.). (2001). *ಬಸವಣ್ಣನವರ ವಚನಗಳು.* ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು
- ನಾಗಭೂಷಣ, ಸಿ. (2008). *ವೀರಶೈವಸಾಹಿತ್ಯ: ಕೆಲವು ಒಳನೋಟಗಳು,* ವಿಜೇತ ಪ್ರಕಾಶನ, ಗದಗ.
- ನಾರಾಯಣ, ಪಿ.ವಿ. (1983). *ವಚನ ಸಾಹಿತ್ಯ : ಒಂದು ಸಾಂಸ್ಕೃತಿಕ ಅಧ್ಯಯನ.* ವೀರಶೈವ ಅಧ್ಯಯನ ಸಂಸ್ಥೆ.
- *ಸುಂಕದ ಬಂಕಣ್ಣ.* ಕಣಜ–ಸಮಗ್ರ ವಚನ ಸಾಹಿತ್ಯ. ಕಣಜ ಅಂತರ್ಜಾಲ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ.
- *ಸುಂಕದ ಬಂಕಣ್ಣನ ವಚನಗಳು.* ಕಣಜ–ಸಮಗ್ರ ವಚನ ಸಾಹಿತ್ಯ. ಕಣಜ ಅಂತರ್ಜಾಲ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ.